ಜಿಕೆವಿಕೆಯಲ್ಲಿ ಸಿರಿಧಾನ್ಯ ಅತ್ಯುತ್ಕೃಷ್ಟತಾ ಕೇಂದ್ರ ಶುರು

■ **ಉದಯವಾಣಿ ಸಮಾಚಾರ**

ಬೆಂಗಳೂರು: ಸಿರಿಧಾನ್ಯ ಬೆಳೆಯುವ ರೈತರಿಗೆ ಸಹಾಯವಾಗಲೆಂದು ಜಿಕೆವಿಕೆ ಆವರಣದಲ್ಲಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಸಿರಿಧಾನ್ಯಗಳ ಅತ್ಯುತ್ಕೃಷ್ಟತಾ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಪ್ರಾಥಮಿಕ ಸಂಸ್ಕರಣೆಯಲ್ಲಿ ಸಿರಿಧಾನ್ಯಗಳಲ್ಲಿರುವ ಕಲ್ಮಶ, ಕಸ ಕಡ್ಡಿ ಇತರೆ ಕಳೆ ಬೀಜ ಮತ್ತು ಕಾಳಿನ ಹೊಟ್ಟು ತೆಗೆದು ಹಾಕುವ ಪ್ರಕ್ರಿಯೆ ಅಂದರೆ, ವರ್ಗಿಕರಿಸುವುದು , ಕಲ್ಲು ತೆಗೆಯುವುದು ಮತ್ತು ಹೊಟ್ಟು ತೆಗೆಯುವುದು ಈ ಎಲ್ಲಾ ಕಾರ್ಯಗಳನ್ನು ಮಾಡಲು ಬೇಕಾದ ಯಂತ್ರಗಳು ಈ ಕೇಂದ್ರದಲ್ಲಿ ಲಭ್ಯವಿವೆ. ದ್ವಿತೀಯ ಸಂಸ್ಕರಣೆಯೆಂದರೆ ಪ್ರಾಥಮಿಕ ಸಂಸ್ಕರಣೆ ಮಾಡಿದ ಕಚ್ಚಾ ವಸ್ತುಗಳನ್ನು ತಿನ್ನಲು ಸಿದ್ಧ ವಸ್ತುಗಳನ್ನಾಗಿ ಪರಿವರ್ತಿಸುವ ಪ್ರಕ್ರಿಯೆ. ಉದಾಹರಣೆಗೆ, ಅಡುಗೆ ಮಾಡಲು ತಯಾರಿರುವ ಉತ್ಪನ್ನಗಳು, ರೆಡಿ-ಟು-ಕುಕ್ ಮತ್ತು ತಿನ್ನಲು ಸಿದ್ಧವಿರುವ ಪದಾರ್ಥಗಳು, ರೆಡಿ-ಟು-ಈಟ್. ಸಿರಿಧಾನ್ಯಗಳ ಮೌಲ್ಯವರ್ಧನೆಗೆ ಬೇಕಾದ ಗಿರಣಿ, ಹುರಿಯುವ ಯಂತ್ರ, ಎಕ್ಸ್ ಟ್ರೂಡರ್‌ಗಳು ಲಭ್ಯವಿದ್ದು, ಸಿರಿಧಾನ್ಯಗಳಲ್ಲಿ ವಿವಿಧ ಬಗೆಯ ಆಹಾರ ಪದಾರ್ಥಗಳ ನವೀನ ಆವಿಷ್ಕಾರಗಳನ್ನು ತಯಾರಿಸಲು ಉಪಯೋಗಿಸಿಕೊಳ್ಳಬಹುದಾಗಿದೆ.

10-07-2024
Udayavani
Pg 03

ಹಸು-ಎಮ್ಮೆ ಖರೀದಿಸಲು ಮಹಿಳೆಯರಿಗೆ ನೆರವು

10-07-2024
Hosadiganta
Pg 08

ದೊಡ್ಡಬಳ್ಳಾಪುರ: ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಹೈನುಗಾರಿಕೆ ಪ್ರೋತ್ಸಾಹಿಸಲು ಹಸು, ಎಮ್ಮೆ ಖರೀದಿಗೆ ಆರ್ಥಿಕ ನೆರವು ನೀಡಲಾಗುತ್ತಿದೆ.

ಪ್ರಸಕ್ತ ಸಾಲಿನಲ್ಲಿ ಹೈನುಗಾರಿಕೆಗಾಗಿ ವಿವಿಧ ಬ್ಯಾಂಕ್ ಗಳಲ್ಲಿ ಸಾಲ ಪಡೆಯುವ ಪ್ರತಿ ಫಲಾನುಭವಿಗಳು ಪಡೆಯುವ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವ ರೈತ ಮಹಿಳೆಯರಿಗೆ ಪ್ರತಿ ತ್ರೈಮಾಸಿಕವಾಗಿ

ಪಾವತಿ ಮಾಡುವ ಬಡ್ಡಿ ಮೊತ್ತದಲ್ಲಿನ ಶೇಕಡ 6 ರಷ್ಟನ್ನು (ರೂ.3625/-) ರಾಜ್ಯ ಸರ್ಕಾರದಿಂದ ಸಹಾಯಧನ ರೂಪದಲ್ಲಿ ನೀಡುವ ಯೋಜನೆ ಇರುತ್ತದೆ.

ಈ ಕಾರ್ಯಕ್ರಮವನ್ನು ವಾಣಿಜ್ಯ ಬ್ಯಾಂಕ್ಗಳ ಸಮನ್ವ ಯದೊಂದಿಗೆ ಅನುಷ್ಠಾನಗೊಳಿಸಲಾಗುವುದು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಹೈನುಗಾರಿಕೆಗೆ ರಾಷ್ಟ್ರೀಕೃತ ಬ್ಯಾಂಕ್, ಗ್ರಾಮೀಣ ಬ್ಯಾಂಕ್ ಹಾಗೂ ಸಹಕಾರ ಬ್ಯಾಂಕ್‌ಗಳಲ್ಲಿ ಸಾಲ ಪಡೆಯುವ ರೈತ ಮಹಿಳೆಯರು ಈ ಯೋಜನೆಯ ಸದುಪಯೋಗ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಪಶುವೈದ್ಯಕೀಯ ಸಂಸ್ಥೆಗಳನ್ನು ಅಥವಾ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸುವುದು. ದೇವನಹಳ್ಳಿ ತಾಲೂಕು ಪಶು ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ(ಆಡಳಿತ) ದೂ.ಸಂ-9945322938, ದೊಡ್ಡಬಳ್ಳಾಪುರ ತಾಲೂಕು ಪಶು ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ (ಆಡಳಿತ) ದೂ.ಸಂ-9845305839, ಹೊಸಕೋಟೆ ತಾಲೂಕು ಪಶು ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ (ಆಡಳಿತ) ದೂ.ಸಂ-9480910509, ನೆಲಮಂಗಲ ತಾಲೂಕು ಪಶು ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ (ಆಡಳಿತ) ದೂ.ಸಂ-9845637387 ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖಾ ಜಿಲ್ಲಾ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿರಿಧಾನ್ಯಗಳ ಉತ್ಕೃಷ್ಟ ಕೇಂದ್ರ ಬಳಸಲು ಅವಕಾಶ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಹೆಬ್ಬಾಳದ ಜಿಕೆವಿಕೆ ಆವರಣದಲ್ಲಿರುವ ಸಿರಿಧಾನ್ಯಗಳ ಉತ್ಕೃಷ್ಟ ಕೇಂದ್ರದ ಪ್ರಯೋಜನ ಪಡೆಯಲು ವ್ಯಾಪಾರಸ್ಥರು, ರೈತರಿಗೆ ಅವಕಾಶ ಮಾಡಿಕೊಡಲು ಮುಂದಾಗಿದೆ.

ಕೇಂದ್ರದಲ್ಲಿ ಸಿರಿಧಾನ್ಯಗಳ ಪ್ರಾಥಮಿಕ ಸಂಸ್ಕರಣೆಯಾದ ಕಲ್ಮಶ, ಕಸ-ಕಡ್ಡಿ, ಕಾಳಿನ ಹೊಟ್ಟು ತೆಗೆಯುವುದು ಮತ್ತಿತರ ಕಾರ್ಯಗಳನ್ನು ಮಾಡಲಾಗುವುದು. ದ್ವಿತೀಯ ಸಂಸ್ಕರಣೆಯಲ್ಲಿ ಶಾವಿಗೆ, ಅವಲಕ್ಕಿ, ಚಕ್ಕುಲಿ, ಲಡ್ಡು ಮತ್ತಿತರ ಪದಾರ್ಥಗಳನ್ನು ತಯಾರು ಮಾಡಬಹುದು. ಇದಕ್ಕೆ ಅಗತ್ಯವಿರುವ ಉಪಕರಣಗಳು ಈ ಕೇಂದ್ರದಲ್ಲಿವೆ. ವಿವಿಧ ಬಗೆಯ ಆಹಾರ ಪದಾರ್ಥಗಳನ್ನು ಸಣ್ಣ ಪ್ರಮಾಣದಲ್ಲಿ ತಯಾರಿಸಲು ಉದ್ದಿಮೆದಾರರು, ರೈತರು ಈ ಯಂತ್ರಗಳನ್ನು ದಿನನಿತ್ಯದ ಕಚೇರಿ ವೇಳೆಯಲ್ಲಿ ಬಳಸಿಕೊಳ್ಳಬಹುದು. ಕಡಿಮೆ ಬೆಲೆ ನಿಗದಿ ಮಾಡಲಾಗಿದೆ ಎಂದು ವಿವಿ ಪ್ರಕಟಣೆ ತಿಳಿಸಿದೆ.

10-07-2024
Kannadaprabha Pg 02

ಜಿಕೆವಿಕೆಯಲ್ಲಿ ಪ್ರತಿ ತಿಂಗಳು 'ಕೃಷಿ ಉತ್ಪನ್ನ ಸಂತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೃಷಿ ವಿಶ್ವವಿದ್ಯಾಲಯದ (ಜಿಕೆವಿಕೆ) ಆವರಣದಲ್ಲಿ ಇನ್ನು ಮುಂದೆ ಪ್ರತಿ ತಿಂಗಳ 4ನೇ ಶನಿವಾರ 'ಕೃಷಿ ಉತ್ಪನ್ನ ಸಂತೆ' ಆಯೋಜಿಸಲಾಗುತ್ತಿದೆ.

ಕಳೆದ ತಿಂಗಳು ಪ್ರಾಯೋಗಿಕವಾಗಿ ನಡೆದ ಕೃಷಿ ಉತ್ಪನ್ನಗಳ ಸಂತೆಗೆ ಸಾರ್ವಜನಿಕರಿಂದ ಉತ್ತಮ ಸ್ಪಂದನ ದೊರಕಿರುವುದರಿಂದ ಉತ್ತೇಜನಗೊಂಡಿರುವ ವಿ.ವಿ, ತಿಂಗಳಿಗೊಮ್ಮೆ ಸಂತೆ ನಡೆಸಲು ನಿರ್ಧರಿಸಿದೆ.

'ಎರಡನೇ ಪ್ರಯೋಗವಾಗಿ ಪ್ರತಿ ತಿಂಗಳ ಒಂದು ದಿನ ಸಂತೆ ನಡೆಸಲು ನಿರ್ಧರಿಸಿದೆವು. ಈ ಬಾರಿ ಜುಲೈ 27ರಂದು ಸಂತೆ ನಡೆಸುತ್ತಿದ್ದೇವೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ್ ತಿಳಿಸಿದರು.

'ಹಿಂದಿನ ಸಂತೆಯಲ್ಲಿ ಕೃಷಿ ವಿಶ್ವವಿದ್ಯಾಲಯದ ಉತ್ಪನ್ನಗಳನ್ನಷ್ಟೇ ಮಾರಾಟಕ್ಕೆ ಇಡಲಾಗಿತ್ತು. ಈ ಬಾರಿ ಕೃಷಿ ವಿಶ್ವವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರದ ಬೆಂಬಲದೊಂದಿಗೆ ರಚನೆಯಾಗಿರುವ ರೈತ ಉತ್ಪಾದಕ ಸಂಸ್ಥೆಗಳು, ಮಹಿಳಾ ಸ್ವ ಸಹಾಯ ಸಂಘಗಳ ಸದಸ್ಯರು ತಯಾರಿಸಿರುವ ಉತ್ಪನ್ನಗಳ ಮಾರಾಟಕ್ಕೂ ವ್ಯವಸ್ಥೆ ಮಾಡಲಾಗುತ್ತಿದೆ' ಎಂದು ವಿವರಿಸಿದರು.

'ಸಂತೆಯ ಉದ್ದೇಶ, ಉತ್ಪನ್ನಗಳ ಮಾರಾಟವಷ್ಟೇ ಅಲ್ಲದೇ, ಕೃಷಿ ವಿಶ್ವವಿದ್ಯಾಲಯದ ಚಟುವಟಿಕೆಗಳನ್ನು ಜನರಿಗೆ ಪರಿಚಯಿಸುವುದೂ ಆಗಿದೆ. ಜೊತೆಗೆ, ಕೈತೋಟಕ್ಕೆ ಬೇಕಾದ ತರಕಾರಿ, ಹೂವಿನ ಗಿಡಗಳ ಬೀಜಗಳು, ಹಣ್ಣಿನ ಗಿಡಗಳು ಲಭ್ಯವಿರುತ್ತವೆ. ಕೈತೋಟಕ್ಕೆ ಬೇಕಾದ ಉಪಕರಣಗಳು, ಯಂತ್ರೋಪಕರಣಗಳೂ ಇರುತ್ತವೆ' ಎಂದರು. ಈ ಪ್ರಯೋಗವೂ ಯಶಸ್ವಿಯಾದರೆ, ಮುಂದಿನ ಸಂತೆಯನ್ನು ಇನ್ನಷ್ಟು ದೊಡ್ಡ ವೇದಿಕೆಯಲ್ಲಿ ನಡೆಸುವ ಯೋಚನೆ ಇದೆ ಎಂದರು.

10-07-2024
Prajavani Pg 4A

ಜಿಕೆವಿಕೆ ಆವರಣದಲ್ಲಿ ಸಿರಿಧಾನ್ಯಗಳ ಸಂಸ್ಕರಣಾ ಕೇಂದ್ರ

ವಿಜಯ ಕರ್ನಾಟಕ
ಬುಧವಾರ,10 ಜುಲೈ 2024

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಜಿಕೆವಿಕೆ ಆವರಣದಲ್ಲಿ ಸಿರಿಧಾನ್ಯಗಳ ಅತ್ಯುತ್ಕೃಷ್ಟತಾ ಕೇಂದ್ರ ಕಾರ್ಯನಿರ್ವಹಿಸುತ್ತಿದ್ದು, ಸಿರಿಧಾನ್ಯ ಬೆಳೆದ ರೈತರು ಧಾನ್ಯಗಳ ಒಕ್ಕಣೆ, ಸಂಸ್ಕರಣೆಗೆ ಬೇಕಾದ ಯಂತ್ರೋಪಕರಣಗಳು ಇಲ್ಲಿ ಲಭ್ಯವಿವೆ. ಅಲ್ಲದೆ, ರೈತರಿಗೆ ಕಡಿಮೆ ದರಕ್ಕೆ ಯಂತ್ರೋಪಕರಣಗಳನ್ನು ಬಾಡಿಗೆಗೆ ನೀಡಲಾಗುತ್ತದೆ.

ಸಿರಿಧಾನ್ಯಗಳ ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಉತ್ಪನ್ನಗಳ ಅಭಿವೃದ್ಧಿಗಾಗಿ ಸಿರಿಧಾನ್ಯಗಳ ಅತ್ಯುತ್ಕೃಷ್ಟತಾ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಕೇಂದ್ರದಲ್ಲಿ ಸಿರಿಧಾನ್ಯಗಳ ಪ್ರಾಥಮಿಕ ಮತ್ತು ದ್ವಿತೀಯ ಸಂಸ್ಕರಣೆ ಮಾಡಲಾಗುತ್ತದೆ.

ಪ್ರಾಥಮಿಕ ಸಂಸ್ಕರಣೆಯಲ್ಲಿ ಸಿರಿಧಾನ್ಯಗಳಲ್ಲಿರುವ ಕಲ್ಮಶ, ಕಸ, ಇತರೆ ಕಳೆ ಬೀಜ ಮತ್ತು ಕಾಳಿನ ಹೊಟ್ಟು ತೆಗೆದು ಹಾಕುವ ಪ್ರಕ್ರಿಯೆ ಮಾಡಲಾಗುತ್ತದೆ. ಪ್ರಾಥಮಿಕ ಸಂಸ್ಕರಣೆಯಲ್ಲಿರುವ ಕಾರ್ಯ ವಿಧಾನಗಳೆಂದರೆ ವರ್ಗೀಕರಿಸುವುದು (ಗ್ರೇಡಿಂಗ್), ಕಲ್ಲು ತೆಗೆಯುವುದು (ಡಿ-ಸ್ಟೋನಿಂಗ್) ಮತ್ತು ಹೊಟ್ಟು ತೆಗೆಯುವುದು (ಡಿ-ಹಲ್ಲಿಂಗ್).ಈ ಎಲ್ಲಾ ಕಾರ್ಯಗಳನ್ನು ಮಾಡಲು ಬೇಕಾದ ಯಂತ್ರಗಳು ಸಿರಿಧಾನ್ಯಗಳ ಅತ್ಯುತ್ಕೃಷ್ಟತಾ ಕೇಂದ್ರದಲ್ಲಿ ಲಭ್ಯವಿವೆ ಎಂದು ಬೆಂಗಳೂರು ಕೃಷಿ ವಿವಿ ಹಿರಿಯ ಪ್ರಾಧ್ಯಾಪಕರಾದ ಕೆ. ಶಿವರಾಮ್ ತಿಳಿಸಿದ್ದಾರೆ.

ರೈತರು, ಉದ್ಯಮಿಗಳಿಗೆ ಬಾಡಿಗೆಗೆ ಲಭ್ಯ

ದ್ವಿತೀಯ ಹಂತದ ಸಂಸ್ಕರಣೆಯಲ್ಲಿ ಪ್ರಾಥಮಿಕ ಸಂಸ್ಕರಣೆ ಮಾಡಿದ ಕಚ್ಚಾ ವಸ್ತುಗಳನ್ನು ತಿನ್ನಲು ಸಿದ್ಧ ವಸ್ತುಗಳನ್ನಾಗಿ ಪರಿವರ್ತಿಸುವ ಪ್ರಕ್ರಿಯೆ ನಡೆಯಲಿದೆ. ಅಡುಗೆ ಮಾಡಲು ತಯಾರಿರುವ ಉತ್ಪನ್ನಗಳು, ರೆಡಿ-ಟು-ಕುಕ್ (ಶಾವಿಗೆ, ಅವಲಕ್ಕಿ, ಪಾಸ್ತ) ಮತ್ತು ತಿನ್ನಲು ಸಿದ್ಧವಿರುವ ಪದಾರ್ಥಗಳು, ರೆಡಿ-ಟು-ಈಟ್ (ಚಕ್ಕುಲಿ, ಲಡ್ಡು, ಬರ್ಫಿ ಇತ್ಯಾದಿ). ಸಿರಿಧಾನ್ಯಗಳ ಮೌಲ್ಯವರ್ಧನೆಗೆ ಬೇಕಾದ ಯಂತ್ರಗಳಾದ ಗಿರಣಿ , ಹುರಿಯುವ ಯಂತ್ರ, ಎಕ್ಸ್ ಟ್ರೂಡರ್‌ಗಳು ಲಭ್ಯವಿವೆ.

ಉದ್ದಿಮೆದಾರರು ಸಿರಿಧಾನ್ಯಗಳಲ್ಲಿ ನಾನಾ ಬಗೆಯ ಆಹಾರ ಪದಾರ್ಥಗಳ ನವೀನ ಆವಿಷ್ಕಾರಗಳನ್ನು ಸಣ್ಣ ಪ್ರಮಾಣದಲ್ಲಿ ತಯಾರಿಸಲು ಉಪಯೋಗಿಸಿಕೊಳ್ಳಬಹುದು. ದಿನನಿತ್ಯವೂ ಕಚೇರಿ ವೇಳೆಯಲ್ಲಿ ಅತೀ ಕಡಿಮೆ ಬೆಲೆಯಲ್ಲಿ ರೈತರು ಹಾಗೂ ಇತರೆ ಪಾಲುದಾರರಿಗೆ ಅನುಕೂಲವಾಗುವಂತೆ ವಿಶ್ವವಿದ್ಯಾಲಯದ ದರ ಪಟ್ಟಿ ಅನುಸಾರ ಮಾಡಿಕೊಡಲಾಗುತ್ತದೆ. ಎಲ್ಲಾ ಪಾಲುದಾರರು, ರೈತರು ಈ ಕೇಂದ್ರದ ಸದುಪಯೋಗವನ್ನು ಪಡೆದುಕೊಳ್ಳುವಂತೆ ಕೋರಲಾಗಿದೆ.

10-07-2024
Kannadaprabha Pg 07

ಸೌಲಭ್ಯ | ಜು.9 ರವರೆಗೂ 5.87,641 ರೈತರಿಂದ 12,29,741 ಹೆಕ್ಟೇರ್ ಬೆಳೆಗೆ ವಿಮೆ | ಅಧಿಕ ಮಳೆಯಾಗುವ ಮುನ್ಸೂಚನೆಯಿಂದ ವಿಮೆಗೆ ಮುಂದಾದ ಅನ್ನದಾತರು

ಬೆಳೆ ವಿಮೆಗೆ ರಾಜ್ಯದಲ್ಲಿ ರೈತರಿಂದ ಉತ್ತಮ ಸ್ಪಂದನೆ

36 ಬೆಳೆಗೆ 4 ಹಂತಕ್ಕೆ ಅಧಿಸೂಚನೆ ಹೊರಡಿಸಿರುವ ಕೃಷಿ ಇಲಾಖೆ | ತುಮಕೂರಲ್ಲಿ 77,069 ರೈತರಿಂದ 1,07,402 ಹೆಕ್ಟೇರ್‌ಗೆ ವಿಮೆ

• **ಸಿದ್ದು ಚಿಕ್ಕಬಳ್ಳೇಕೆರೆ**

ಕನ್ನಡಪ್ರಭ ವಾರ್ತೆ ಬೆಂಗಳೂರು

ಅತಿವೃಷ್ಟಿ-ಅನಾವೃಷ್ಟಿ ಸಂದರ್ಭದಲ್ಲಿ ರೈತರನ್ನು ಆರ್ಥಿಕವಾಗಿ ಕೈಹಿಡಿಯುವ ಬೆಳೆ ವಿಮೆ ಯೋಜನೆಗೆ ಇತ್ತೀಚಿನ ವರ್ಷಗಳಲ್ಲಿ ರಾಜ್ಯದಲ್ಲಿ ಉತ್ತಮ ಪ್ರತಿಕ್ರಿಯೆ ಕಂಡುಬರುತ್ತಿದ್ದು ಪ್ರಸಕ್ತ ಮುಂಗಾರು ಹಂಗಾಮಿನಲ್ಲೂ ಅನ್ನದಾತರು ಬೆಳೆ ವಿಮೆಯತ್ತ ಮುಖ ಮಾಡಿದ್ದಾರೆ.

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ಮುಂಗಾರು ಹಂಗಾಮಿನಲ್ಲಿ ಜೂ.9 ರವರೆಗೂ 5,87,641 ರೈತರು 12,29,741 ಹೆಕ್ಟೇರ್‌ಗೆ ವಿಮೆ ಮಾಡಿಸಿದ್ದಾರೆ. ಕಳೆದ ವರ್ಷ ಈ ಅವಧಿಯಲ್ಲಿ 2 ಲಕ್ಷ ರೈತರು ಮಾತ್ರ ವಿಮೆ ಮಾಡಿಸಿದ್ದರು. ಬರಗಾಲ, ಭಾರೀ ಮಳೆಯ ಆತಂಕದಿಂದಾಗಿ ಬೆಳೆ ವಿಮೆ ಮಾಡಿಸುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ

ಹೋಗುತ್ತಿರುವುದು ಕಂಡುಬಂದಿದೆ.

2023-24 ನೇ ಸಾಲಿನಲ್ಲಿ ಮುಂಗಾರು ಹಂಗಾಮಿನಲ್ಲಿ ಒಟ್ಟಾರೆ 19.14 ಲಕ್ಷ ರೈತರು 15.09 ಲಕ್ಷ ಹೆಕ್ಟೇರ್‌ಗೆ ವಿಮೆ ಮಾಡಿಸಿದ್ದರು. ಬರಗಾಲದಿಂದಾಗಿ ಇದರಲ್ಲಿ 15.41 ಲಕ್ಷ ರೈತರಿಗೆ 1791.02 ಕೋಟಿ ರು. ಪಾವತಿಸಲಾಗಿತ್ತು. ಪ್ರಸಕ್ತ ಸಾಲಿನಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗಬಹುದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿರುವುದರಿಂದ ವಿಮೆ ಮಾಡಿಸಲು ರೈತರು ಮುಂದಾಗಿದ್ದಾರೆ.

ಬೆಳೆ ಸಾಲಕ್ಕೆ ಜಮಾ ಮಾಡಿಕೊಳ್ಳುವಂತಿಲ್ಲ

ಬೆಳೆ ಸಾಲ ಪಡೆದ ಅಥವಾ ಪಡೆಯದ ರೈತರೂ ವಿಮೆ ಮಾಡಿಸಬಹುದು. ಯೋಜನೆಯಲ್ಲಿ ಪಾಲ್ಗೊಳ್ಳಲು ರೈತರು ಫ್ರೂಟ್ ಐಡಿ ಹೊಂದಿರುವುದು ಕಡ್ಡಾಯವಾಗಿದೆ. ಬ್ಯಾಂಕ್‌ಗಳು ರೈತರಿಗೆ ಸಂದಾಯವಾದ ವಿಮಾ ಹಣವನ್ನು ಬೆಳೆ ಸಾಲಕ್ಕೆ ಜಮಾ ಮಾಡಿಕೊಳ್ಳುವಂತಿಲ್ಲ ಎಂದು ಕೃಷಿ ಇಲಾಖೆ ಮೂಲಗಳು ಸ್ಪಷ್ಟಪಡಿಸಿವೆ.

ತುಮಕೂರಿನಲ್ಲಿ 77,069 ರೈತರಿಂದ ವಿಮೆ: ಬೆಳೆ ವಿಮೆ ಮಾಡಿಸಲು 4 ಹಂತದಲ್ಲಿ ಜಿಲ್ಲೆ ಹಾಗೂ ಬೆಳೆವಾರು ವಿಭಜಿಸಿ ಅಂತಿಮ ದಿನಾಂಕವನ್ನು ಕೃಷಿ ಇಲಾಖೆ ಈಗಾಗಲೇ ಪ್ರಕಟಿಸಿದೆ. ಚಾಮರಾಜನಗರ, ಚಿಕ್ಕಮಗಳೂರು, ದಾವಣಗೆರೆ, ಹಾಸನ, ಕೋಲಾರ, ಮಂಡ್ಯ, ಮೈಸೂರು ಜಿಲ್ಲೆಯ ಕೆಲ ಬೆಳೆಗಳಿಗೆ ಮಾತ್ರ ವಿಮೆ ಮಾಡಿಸಲು ಅಂತಿಮ ದಿನ ಜು.1 ಆಗಿತ್ತು. ಈ ಜಿಲ್ಲೆಗಳಲ್ಲದೇ ಇನ್ನುಳಿದ ಜಿಲ್ಲೆಗಳು ಸೇರಿದಂತೆ ಹಲವು ಬೆಳೆಗಳಿಗೆ ಜು.15, 31 ಹಾಗೂ ಆ.18 ಕೊನೆಯ ದಿನವಾಗಿದೆ. ಜು.9 ರವರೆಗಿನ ದಾಖಲೆಗಳ ಪ್ರಕಾರ ತುಮಕೂರಿನಲ್ಲಿ ಅತಿ ಹೆಚ್ಚು ಅಂದರೆ, 77,069 ರೈತರು 1,07,402 ಹೆಕ್ಟೇರ್‌ಗೆ ವಿಮೆ ಮಾಡಿಸಿದ್ದಾರೆ.

ಹಾವೇರಿಯಲ್ಲಿ 67,487 ರೈತರು 1,19,647 ಹೆಕ್ಟೇರ್ ಬೆಳೆಗೆ ವಿಮೆ ಮಾಡಿಸಿದ್ದಾರೆ. ಕಲಬುರಗಿಯಲ್ಲಿ 60,596 ರೈತರು (1,83,562 ಹೆಕ್ಟೇರ್), ಚಿತ್ರದುರ್ಗದಲ್ಲಿ 46,589 ರೈತರು (1,23,816 ಹೆಕ್ಟೇರ್) ಬೆಳೆ ವಿಮೆಗೆ ಮುಂದಾಗಿದ್ದಾರೆ. ಆದರೆ, ಬೆಂಗಳೂರು ಗ್ರಾಮಾಂತರ, ಯಾದಗಿರಿ, ಚಿಕ್ಕಮಗಳೂರು, ಬಳ್ಳಾರಿ, ಕೋಲಾರ, ರಾಮನಗರ ಮತ್ತಿತರ ಜಿಲ್ಲೆಗಳಲ್ಲಿ ರೈತರಿಂದ ಉತ್ತಮ ಪ್ರತಿಕ್ರಿಯೆ ಇಲ್ಲಿಯವರೆಗೂ ಕಂಡುಬಂದಿಲ್ಲ.

ಜಿಲ್ಲೆ, ಬೆಳೆಗೆ ಅನುಗುಣವಾಗಿ ಅಂತಿಮ ದಿನ: 36 ವಿಧದ ಆಹಾರ, ಎಣ್ಣೆಕಾಳು, ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳಿಗೆ ಕೃಷಿ ಇಲಾಖೆ ಅಧಿಸೂಚನೆ ಹೊರಡಿಸಿದ್ದು ಎಣ್ಣೆ ಕಾಳು ಬೆಳೆಗಳಿಗೆ ಶೇ.2 ರಷ್ಟು ಮತ್ತು ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳಿಗೆ ಶೇ.5 ರಷ್ಟು ಪ್ರೀಮಿಯಂ ಅನ್ನು ರೈತರು ಪಾವತಿಸಬೇಕು. ರಾಜ್ಯ ಮತ್ತು ಕೇಂದ್ರ ಸರ್ಕಾರ ಇನ್ನುಳಿದ ಪ್ರೀಮಿಯಂ ಮೊತ್ತ ಪಾವತಿಸಲಿವೆ. ರೈತರು ಸಮೀಪದ ರೈತ ಸಂಪರ್ಕ ಕೇಂದ್ರಕ್ಕೆ ತೆರಳಿ ಬೆಳೆ ಮತ್ತು ಜಿಲ್ಲಾವಾರು ಅಂತಿಮ ದಿನಾಂಕವನ್ನು ಪಡೆಯಬಹುದು.

10-07-2024
Eco times Pg 10

Govt Mulls Fixed Duty on Export of Parboiled Rice



Sutanuka Ghosal

Kolkata: The government is contemplating fixing the export duty on parboiled rice at $100 per tonne, people aware of the matter said.

A proposal to this effect was made recently as a measure to curb under-invoicing by exporters wanting to avoid higher payment on account of the current levy of 20% on this variety of rice.

The government has formed a committee — Rice Federation Consulting Committee — under the commerce ministry to deal with the issue of rice exports.

On August 25 last year, a 20% export duty was levied on exports of parboiled rice till October 16, 2023 as a step to maintain adequate domestic stock and keep prices under check. The duty, which was extended till March 31 this year, is still continuing.

According to some industry executives, many exporters under-invoice so as to avoid higher payout as export duty. "For instance, if a kilo of rice was being exported at ₹80, then they would show that they are selling it at ₹40 per kg, which would automatically bring down the fund outgo on export duty," said an industry executive.

However, the government's move to introduce a fixed export duty of $100 per tonne has irked a section of rice exporters.

"Initially, the imposition of export duties on parboiled rice had a significant impact on its export," said Keshab Kumar Haldar, managing director and CEO of HVL Group.

FOR FULL REPORT, GO TO www.economictimes.com

10-07-2024
Times of Ind Pg 17

Rare Florida cactus is first US species lost to sea rise

Washington: A rare species of tree cactus has gone extinct in Florida, in what is believed to be the first species lost to sea level rise in the US, researchers said on Tuesday.

The Key Largo tree cactus (Pilosocereus millspaughii) was restricted to a single small population in the Florida Keys, an archipelago off the southern tip of the state, first discovered in 1992 and monitored intermittently since then.

AFP

An image released by the Florida Museum of Natural History shows thick hair and spines blanket parts of the Key Largo tree cactus

But salt water intrusion caused by rising seas, soil erosion from storms and high tides, and herbivory by mammals placed significant pressure on the last population.

By 2021, a once-thriving group of roughly 150 stems in an isolated mangrove forest had dramatically declined to six fragile, struggling fragments, which researchers relocated for off-site cultivation in a bid to ensure their survival.

"Unfortunately, the Key Largo tree cactus may be a bellwether for how other low-lying coastal plants will respond to climate change," said Jennifer Possley, the director of regional conservation at Fairchild Tropical Botanic Garden.

Key Largo tree cacti continue to grow on a few scattered Caribbean islands, including northern Cuba and parts of the Bahamas. These plants can reach heights exceeding 20 feet and feature cream-coloured flowers with a garlic scent that gleam in moonlight. AFP

Minimum Support Price, loan waiver crucial issues for farmers

10-07-2024
Hindu Pg 13

BUDGET IN FOCUS

Ashok Dhawale

The Bharatiya Janata Party-led National Democratic Alliance (NDA) faced huge setbacks in the Lok Sabha elections in the agrarian belts of the country.

This government is a continuation of the first two Narendra Modi regimes that favoured the corporate houses and tweaked policies in agriculture sector in their favour.

Great expectations: Farmers expect this government to make a radical break from all its earlier Budgets. K.V.S.GIRI

Rising farmer suicides

Farmers expect that this government make a radical break from all its earlier Budgets. Of course, this is asking for a tall order. But unless that is done, the farmers unrest and agrarian crisis are not going to subside. The National Crime Records Bureau data tells us that 1,00,474 farmers and agricultural workers committed suicide between 2015 and 2022.

This is a tragic indication of the agrarian crisis in the country.

The most important issue for farmers in the country today is statutory minimum support price at the rate of C2+50%, that is one-and-a-half times the comprehensive cost of production, as recommended by the M.S. Swaminathan Commission. Unless that is done, it's going to be impossible even to begin to resolve the agrarian crisis. They will have to make Budgetary provisions to implement this. This is our first demand.

Cut input prices

The second point is about the cost of production, which is continuously rising. Our expectation from the Budget is they must cut down the cost of production by reducing the price of fertilizers, seeds, insecticides, diesel, water and electricity.

Rates of all these inputs are going up. A statutory MSP at a rate of C2+50% may have no meaning if the cost of production is not brought down.

The government should bring control through the Budget on the corporates who are producing the inputs. The Budget should help public sector companies engaged in the production of inputs.

Loan waiver

The third expectation from the Budget is that they give a complete one-time loan waiver for farmers and agricultural workers all over the country. Unless this is done, farm suicides cannot be prevented.

This government has written off loans worth about ₹16 lakh crore of corporates.

Loan waiver, bringing down the cost of production and ensuring MSP at a rate of C2+50 have to be done together. If this is done, 70% of the crisis in the agrarian sector can be dealt with.

The fourth point is relevant in the context of climate change and the environmental situation. In the light of continuous drought, flood, unseasonal rains and hailstorms, there should be a comprehensive crop insurance scheme, which is totally different from the Pradhan Mantri Fasal Bima Yojana. Several States have opted out of it. Some States are starting their own scheme. This is because PMFBY is working in the interest of insurance companies, not of farmers.

Budgetary provision has to be made for a comprehensive scheme that helps farmers.

The fifth point is on the question of irrigation and power. Public sector investment in irrigation and power has been cut down in the last 10 years.

Irrigation projects

These sectors are being handed over to the private companies and hence, the cost of water and power is increasing. A number of irrigation projects are incomplete in the country. If they are completed, a large section of land will come under irrigation.

So, the Budget should have provisions to complete these irrigation projects. Power production is also now under the control of corporate houses. Smart meters are going to create havoc for all consumers, rural and urban.

Expand MNREGA

The sixth point is about the expansion of MGNREGA. Ever since the Modi Government came to power, they have been trying to starve MGNREGA of funds. The number of work days has come to just 42. The government will have to increase the wages to ₹600 and the number of days of work to at least 200.

Radical land reforms

The seventh point, which is very important, is the question of land.

The rulers have changed the slogan of 'Land to the Tiller' to 'Land to the Corporates'. In total violation of the Land Acquisition Act, there's massive acquisition of farm lands by corporate houses. Land acquisition must be done only when strictly necessary for a public purpose. Radical land reforms must be initiated and completed.

Restore corporate tax

To raise resources for all this, the Union government must impose wealth tax and inheritance tax. They have tremendously reduced corporate tax. They must restore it. Rich have to pay more income tax and the middle class should get some relief.

Direct taxes must be increased and indirect taxes must be reduced.

(Ashok Dhawale is a senior leader of the Samyukt Kisan Morcha and president of the All India Kisan Sabha)

Madhya Pradesh alone produces about 30% of spices



Source: NHB's Second Advance Estimate (2023-24)

By Atul Thakur

ಸಂಯುಕ್ತ ಕರ್ನಾಟಕ

55 ದಿನದಲ್ಲಿ ಬೆಳೆದ ಭತ್ತ: ಅಚ್ಚರಿ ಮೂಡಿಸಿದ ಮಹಿಳೆ!

ಎ.ಎನ್.ನಿಂಗಪ್ಪ

ಸಾಮಾನ್ಯವಾಗಿ ಯಾವುದೇ ತಳಿಯ ಭತ್ತ ಬೆಳೆದರೆ ಅದು, ಕೊಯ್ಲಿಗೆ ಬರುವುದು 120 ದಿನಗಳು ಬೇಕು. ಆದರೆ ದಾವಣಗೆರೆಯ ರೈತ ಮಹಿಳೆಯೊಬ್ಬರು 'ನವರ' ಎಂಬ ವಿಶೇಷ ತಳಿಯ ಭತ್ತವನ್ನು ಕೇವಲ 55 ದಿನಗಳಲ್ಲಿ ಬೆಳೆದು ಸೈ ಎನಿಸಿಕೊಂಡಿದ್ದಾರೆ.!

ಹೌದು, ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ವೆಂಕಟೇಶ್ವರಪುರ ಗ್ರಾಮದ ಮಂಜುಳಾ ಎಂಬುವರು ಈ ಸಾಧನೆ ಮಾಡಿದ ರೈತ ಮಹಿಳೆಯಾಗಿದ್ದಾಳೆ.

'ನವರ' ಎಂಬ ಭತ್ತದ ತಳಿಯನ್ನು ಸಾವಯವ ಗೊಬ್ಬರದ ಸಹಾಯದಿಂದ ಕೇವಲ 50ರಿಂದ 55 ದಿನಗಳಲ್ಲಿ ಬೆಳೆದಿದ್ದಾರೆ. ತನ್ನ ಎರಡೂವರೆ ಎಕರೆಯಲ್ಲಿ ಭತ್ತ ಬೆಳೆದಿರುವ ಮಂಜುಳಾ ಅವರು, ಮನೆಯಲ್ಲೇ ತಯಾರು ಮಾಡಿದ ಕೊಟ್ಟಿಗೆ ಗೊಬ್ಬರ, ಡಿ ಕಂಪೋಸರ್, ದಶಕಶಪಣ ಗೊಬ್ಬರ ಬಳಕೆ ಮಾಡಿದ್ದಾರೆ. ಭತ್ತದ ಮಡಿ ಮಾಡಿ 21 ದಿನಗಳಲ್ಲಿ ಸಸಿ ನಾಟಿ ಮಾಡಿ ಒಟ್ಟು 50 ದಿನಗಳಾಗಿದೆ. ಈಗಾಗಲೇ ಭತ್ತ ಕಟಾವಿಗೆ ಬಂದಿರುವುದು ಅಚ್ಚರಿಯಾಗಿದೆ.

ಪತಿ ಅಕಾಲಿಕವಾಗಿ ಸಾವನ್ನಪ್ಪಿದ ಬಳಿಕ ಮಂಜುಳಾ ಅವರು ಕೃಷಿ ಚಟುವಟಿಕೆಗಳನ್ನು ಏಕಾಂಗಿಯಾಗಿ ಮುಂದುವರೆಸಿಕೊಂಡು ಹೋಗಿದ್ದಾರೆ. ಕೃಷಿಯಲ್ಲಿ ಪರಿಣತಿ ಹೊಂದಿರುವ ಇವರು ಈ ಹಿಂದೆ ವಿವಿಧ ಭತ್ತದ ತಳಿಗಳನ್ನು ಬೆಳೆದು ಹೆಸರುವಾಸಿಯಾಗಿದ್ದಾರೆ. 'ನವರ' ಭತ್ತ ಹಾಕಿದ್ದೇವೆ, ಇದನ್ನು ಕಡಿಮೆ ನೀರಿನಲ್ಲಿ ಬೆಳೆಯಬಹುದಾಗಿದೆ. ಈ ಬಾರಿ ಕಡಿಮೆ ನೀರು ಇರುವುದಕ್ಕೆ 'ನವರ' ಭತ್ತ ಹಾಕಿದ್ದು ಅನುಕೂಲವಾಗಿದೆ ಎನ್ನುತ್ತಾರೆ ಮಂಜುಳಾ. ಕೃಷಿ ಮಾಡಿಯೇ ಮಂಜುಳಾ ಅವರು ತಮ್ಮ ಇಬ್ಬರು ಪುತ್ರಿಯರಿಗೆ ಉನ್ನತ ಶಿಕ್ಷಣ ಕೊಡಿಸಿದ್ದಾರೆ. ಮಕ್ಕಳನ್ನು ಓದಿಸಲು ಕೃಷಿಯೊಂದಿಗೆ ಟೈಲರಿಂಗ್ ಮಾಡಿ ಶ್ರಮಿಸಿದ್ದಾರೆ. ಆದ್ದರಿಂದ ಇಬ್ಬರು ಪುತ್ರಿಯರು ಕೂಡ ತಾಯಿಗೆ ಕೃಷಿಯಲ್ಲಿ ಸಾಥ್ ನೀಡುತ್ತಿದ್ದಾರೆ.

ಸಕ್ಕರೆ ಕಾಯಿಲೆಗೆ ರಾಮಬಾಣ

ಸಕ್ಕರೆ ಕಾಯಿಲೆಗೆ ಹೇಳಿ ಮಾಡಿಸಿದ ಈ 'ನವರ' ತಳಿಯ ಭತ್ತ (ಕೆಂಪು ಅಕ್ಕಿ) ನಾಟಿ ಮಾಡಿ ಕೇವಲ ಐವತ್ತರಿಂದ ಐವತ್ತೈದು ದಿನಗಳಲ್ಲೇ ಅಚ್ಚರಿಯಂತೆ ಕೊಯ್ಲಿಗೆ ಬಂದಿದೆ. ಕೆಮಿಕಲ್ ಗೊಬ್ಬರ ಬಳಸದೆ ಸಾವಯವ ಗೊಬ್ಬರ ಬಳಕೆ ಮಾಡಿದ ರೈತ ಮಹಿಳೆಗೆ 'ನವರ' ಭತ್ತ ಕೈ ಹಿಡಿದಿದೆ. ಇದು ಶುಗರ್ ಕಂಟ್ರೋಲ್ ಮಾಡುವ ಕೆಂಪು ಅಕ್ಕಿಯ ಭತ್ತ ಆಗಿರುವುದು ವಿಶೇಷವಾಗಿದೆ.

ರಾಜ್ಯ-ಹೊರ ರಾಜ್ಯಗಳಿಗೆ ರಫ್ತು..

ಕಟಾವಿಗೆ ಬಂದಿರುವ ಭತ್ತ ಎಕರೆಗೆ 40 ಚೀಲ ಇಳುವರಿ ಬರುವ ಸಾಧ್ಯತೆ ಇದ್ದು, ಭತ್ತದ ಫಸಲು ಬಂದಾದ ಬಳಿಕ ಅದನ್ನು ಮಿಷನ್‌ಗೆ ಹಾಕಿಸಿ ಕೆಂಪು ಅಕ್ಕಿಯನ್ನು ಬೆಂಗಳೂರು, ಹೈದ್ರಾಬಾದ್, ಧಾರವಾಡ, ರಾಯಚೂರು, ತೆಲಂಗಾಣಕ್ಕೆ ರಫ್ತು ಮಾಡಲಾಗುತ್ತದೆ. ಈ ಭತ್ತದಿಂದ ಬರುವ ಕೆಂಪು ಅಕ್ಕಿಯ ದರ ಮಾರುಕಟ್ಟೆಯಲ್ಲಿ ಒಂದು ಕೆಜಿಗೆ 180 ರೂಪಾಯಿ ಇದೆ. ಇದು ಸಕ್ಕರೆ ಕಾಯಿಲೆಗೆ ಹೇಳಿ ಮಾಡಿಸಿದ ಮದ್ದು ಎಂದು ರೈತೆ ಮಂಜುಳಾ ಮಾಹಿತಿ ಹಂಚಿಕೊಂಡಿದ್ದಾರೆ.

> ನಮ್ಮ ತಾಯಿ ಕಷ್ಟಪಟ್ಟು ಕೃಷಿ ಮಾಡ್ತಿದ್ದಾರೆ. ಜೊತೆಗೆ ನಮಗೆ ಒಳ್ಳೆಯ ವಿದ್ಯೆ ಕೊಡಿಸಿದ್ದಾರೆ. ಟೈಲರಿಂಗ್ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಅಮ್ಮನಿಗೆ ನಾವು ಕೈಲಾದಷ್ಟು ಸಹಾಯ ಮಾಡುತ್ತೇವೆ.
>
> ಸುಷ್ಮಾ । ರೈತ ಮಹಿಳೆಯ ಪುತ್ರಿ.

> ಯಾವುದೇ ಕೆಮಿಕಲ್ ಬಳಸದೆ ಸಾವಯವ ಗೊಬ್ಬರದಲ್ಲೇ ಕಳೆದ ಏಳು ವರ್ಷಗಳಿಂದ ಭತ್ತ ಬೆಳೆಯಲಾಗುತ್ತಿದೆ. ಕೊಟ್ಟಿಗೆ ಗೊಬ್ಬರ, ಡಿ ಕಂಪೋಸರ್, ದಶಕಶಪ ಗೊಬ್ಬರ ತಯಾರು ಮಾಡಿ ಬಳಕೆ ಮಾಡ್ತೇವೆ. ಹೀಗಾಗಿ ಇಳುವರಿ ಹೆಚ್ಚು ಬರುತ್ತದೆ.
>
> ಮಂಜುಳಾ । ರೈತ ಮಹಿಳೆ.

Bangalore Edition Edition
Jul 10, 2024 Page No. 09
Powered by: erelego.com

ಶೇ 40ರಷ್ಟೇ ಸಹಜ ಮಣ್ಣು: ಮುಖ್ಯಮಂತ್ರಿ ಸಿದ್ದರಾಮಯ್ಯ

'ರಾಜ್ಯದಲ್ಲಿ ಮಣ್ಣಿನ ಫಲವತ್ತತೆ ಕುಸಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಮಣ್ಣಿನ ಫಲವತ್ತತೆಗೆ ಸಂಬಂಧಿಸಿದಂತೆ ನಡೆದ ಮಾದರಿ ಸಮೀಕ್ಷೆಯ ಪ್ರಕಾರ ಶೇ 33.78ರಷ್ಟು ಮಣ್ಣು ಆಮ್ಲೀಯ, ಶೇ 26.7ರಷ್ಟು ಕ್ಷಾರೀಯ ಆಗಿದೆ. ಸಹಜ ಮಣ್ಣಿನ ಪ್ರಮಾಣ ಸುಮಾರು ಶೇ 40ರಷ್ಟು ಮಾತ್ರ...'

ಮಣ್ಣಿನ ಫಲವತ್ತತೆ ಕುಸಿತವಾಗು ತ್ತಿರುವ ಬಗ್ಗೆ ಆತಂಕಕಾರಿ ಮಾಹಿತಿ ನೀಡಿದವರು ಮುಖ್ಯಮಂತ್ರಿ ಸಿದ್ದರಾಮಯ್ಯ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ 2 ದಿನ ಸುದೀರ್ಘ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಮಣ್ಣಿನ ಫಲವತ್ತತೆ ಕಡಿಮೆ ಆಗುತ್ತಿರುವುದರಿಂದ ಭವಿಷ್ಯದ ಕರ್ನಾಟಕ ಕುರಿತು ಆತಂಕ ಉಂಟಾಗಿದೆ' ಎಂದು ಹೇಳಿದರು.

'ಸಾವಯವ ಕೃಷಿಗೆ ಒತ್ತು ನೀಡುವ ಮೂಲಕ ನೈಸರ್ಗಿಕ ಇಂಗಾಲದ ಪ್ರಮಾಣ ಹೆಚ್ಚಿಸಲು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದರು. 'ಜನರು ರಸಗೊಬ್ಬರ ಬಳಸುವ ಪ್ರಮಾಣ ಹೆಚ್ಚಾಗುತ್ತಿದೆ. 2014-15ರಲ್ಲಿ 37.4 ಲಕ್ಷ ಟನ್ ರಸಗೊಬ್ಬರ ಬಳಕೆಯಾಗಿದ್ದರೆ, 2023-24ರಲ್ಲಿ ಆ ಪ್ರಮಾಣ 40 ಲಕ್ಷ ಟನ್‌ಗೆ ಏರಿಕೆಯಾಗಿದೆ. 2017-18ರಲ್ಲಿ 16.66 ಲಕ್ಷ ಮಣ್ಣು ಮಾದರಿಗಳ ಪರೀಕ್ಷೆ ಮಾಡಲಾಗಿತ್ತು. ಆ ಪರೀಕ್ಷೆಯ ಪ್ರಕಾರ ಶೇ 50.41ರಷ್ಟು ಸಹಜ ಇಂಗಾಲದ ಕೊರತೆಯಿದೆ. ಸಾರಜನಕ ಶೇ 73.77, ಪೊಟ್ಯಾಶಿಯಂ ಶೇ 24.94 ರಷ್ಟು ಕೊರತೆಯಿದೆ' ಎಂದರು.

'ಕೊರತೆಯ ಪ್ರಮಾಣವನ್ನು ತುಂಬಲು ರೈತರು ರಸಗೊಬ್ಬರದ ಮೊರೆ ಹೋಗಿದ್ದಾರೆ. ಭವಿಷ್ಯದಲ್ಲಿ ಇದು ಬಹಳ ದೊಡ್ಡ ಸಮಸ್ಯೆಯನ್ನು ಹುಟ್ಟು ಹಾಕಲಿದೆ. ರೈತರ ಖರ್ಚು ಹೆಚ್ಚುತ್ತಿದೆ. ಅದಕ್ಕೆ ತಕ್ಕವಾಗಿ ಆದಾಯ ಸಿಗುತ್ತಿಲ್ಲ. ನಮ್ಮ ರೈತರ ಉತ್ಪನ್ನಗಳಲ್ಲಿ ರಾಸಾಯನಿಕ ಅಂಶಗಳು ಹೆಚ್ಚಾಗುತ್ತಿವೆ. ಇದರಿಂದಾಗಿ ಜನರಲ್ಲಿ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ರೋಗಿಗಳ ಸಂಖ್ಯೆಯೂ ಹೆಚ್ಚುತ್ತಿದೆ' ಎಂದೂ ಅವರು ಹೇಳಿದರು.

'ಕಲುಷಿತ ನೀರು: ಅಧಿಕಾರಿಗಳ ವಿರುದ್ಧ ಕ್ರಮ'

'ಕಲುಷಿತ ನೀರು ಕುಡಿದು ಹಲವು ಸಾವು- ನೋವುಗಳು ಸಂಭವಿಸಿವೆ. ಇಂತಹ ಪ್ರಕರಣಗಳು ಮರುಕಳಿಸಿದರೆ ಹಿರಿಯ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಎಚ್ಚರಿಕೆ ನೀಡಿದರು.

'ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಗುಣಮಟ್ಟವನ್ನು ನಿಯಮಿತವಾಗಿ ಪರೀಕ್ಷೆ ಮಾಡಬೇಕೆಂದು ಸೂಚಿಸಲಾಗಿದೆ. ಮುಂದಿನ ದಿನಗಳಲ್ಲಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಾವುಗಳು ಸಂಭವಿಸಿದರೆ ಅಂಥ ಅಧಿಕಾರಿಗಳ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲೂ ಹಿಂಜರಿಯುವುದಿಲ್ಲ ಎಂಬ ಸಂದೇಶ ನೀಡಲಾಗಿದೆ' ಎಂದರು.

10-07-2024
Prajavani
Pg 4B

10-07-2024
Udayavani Pg 11

ಈ ಸಲ ಫಲಪುಷ್ಪ ಪ್ರದರ್ಶನಕ್ಕೆ ಅಂಬೇಡ್ಕರ್ ಥೀಮ್

ಆ.8ರಿಂದ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ | ಪರಿಕಲ್ಪನೆ ಸಿದ್ಧತೆಗೆ ಇಂದು 40 ತಜ್ಞರ ಸಭೆ

■ **ಉದಯವಾಣಿ ಸಮಾಚಾರ**

ಬೆಂಗಳೂರು: ಸ್ವಾತಂತ್ರ್ಯೋತ್ಸವ ಅಂಗವಾಗಿ ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ಆಯೋಜಿಸುವ ಫಲಪುಷ್ಪ ಪ್ರದರ್ಶನಕ್ಕೆ ಪೂರ್ವಧಾರಿತ ಪರಿಕಲ್ಪನೆಯ ಸಿದ್ಧತೆಗಳು ನಡೆಯುತ್ತಿದ್ದು ಬುಧವಾರ 40 ಜನ ತಜ್ಞರ ಸಭೆ ನಡೆಯಲಿದೆ.

ಪ್ರತಿ ವರ್ಷದಂತೆ ಈ ಬಾರಿ ಫಲಪುಷ್ಪ ಪ್ರದರ್ಶನಕ್ಕೆ 'ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್' ಜೀವನಾಧಾರಿತ ವಿಷಯ ಆಯ್ಕೆಯಾಗಿದ್ದು ಇದರ ಸಿದ್ಧತೆಗೆ 2 ದಿನಗಳ ಹಿಂದೆ 30 ಜನ ತಜ್ಞರ ಮೊದಲ ಸಭೆ ನಡೆದಿದ್ದು ಇಂದು 2ನೇ ಸಭೆ ನಡೆಯಲಿದೆ. ಇದರಲ್ಲಿ ಅಂಬೇಡ್ಕರ್ ಅವರನ್ನು ಅರ್ಥೈಸಿಕೊಂಡಿರುವ ರಾಜ್ಯದ ವಿವಿಧ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ವಿದ್ವಾಂಸರು, ಸಂಶೋಧನಾ ಅಭ್ಯರ್ಥಿಗಳು ಸೇರಿದಂತೆ ಸಾರ್ವಜನಿಕರು ಇರಲಿದ್ದಾರೆ.

ಸ್ವಾತಂತ್ರ್ಯೋತ್ಸವ ಅಂಗವಾಗಿ ಈ ಫಲಪುಷ್ಪ ಪ್ರದರ್ಶನವು ಆ.8ರಿಂದ 19ರವರೆಗೆ ಒಟ್ಟು 12 ದಿನಗಳ ಕಾಲ ಜರುಗಲಿದೆ. ಅಂಬೇಡ್ಕರ್ ಅವರ ಹುಟ್ಟು, ಬಾಲ್ಯ, ಶಿಕ್ಷಣ, ಜೀವನ ಹಾಗೂ ದೇಶಕ್ಕಾಗಿ ನೀಡಿರುವ ಅವರ ಕೊಡುಗೆಗಳನ್ನು ಒಳಗೊಂಡಂತೆ ಅವರ ಸಮಗ್ರ ದರ್ಶನವನ್ನು ವಿವಿಧ ಬಣ್ಣಗಳ ಆಕರ್ಷಣೀಯ ಹೂವುಗಳಲ್ಲಿ ಪ್ರದರ್ಶಿಸಲಾಗುತ್ತಿದೆ ಎಂದು ತೋಟಗಾರಿಕೆ ಇಲಾಖೆ (ಲಾಲ್‌ಬಾಗ್) ಜಂಟಿ ನಿರ್ದೇಶಕ ಡಾ. ಎಂ. ಜಗದೀಶ್ ಉದಯವಾಣಿಗೆ ತಿಳಿಸುತ್ತಾರೆ.

> **ಪ್ರತಿ ವರ್ಷದಂತೆ ಈ ಬಾರಿಯೂ 12 ದಿನಗಳ ಫಲಪುಷ್ಪ ಪ್ರದರ್ಶನ ನಡೆಯಲಿದ್ದು, ಪೂರ್ವಭಾವಿ ಸಿದ್ಧತೆಗಳು ನಡೆಯುತ್ತಿವೆ. ಅಂಬೇಡ್ಕರ್ ಕುರಿತ ಸಮಗ್ರ ಪುಷ್ಪ ದರ್ಶನಕ್ಕೆ ಪರಿಕಲ್ಪನೆಯ ಸಿದ್ಧತೆಗಳು ಜರಗುತ್ತಿವೆ. ಇನ್ನೂ ಒಂದೆರಡು ಸಭೆಗಳಲ್ಲಿ ಸಿದ್ಧತೆಗಳ ಅಂತಿಮ ತೀರ್ಮಾನವಾಗಲಿದೆ. ತದನಂತರ, ಕಲಾವಿದರನ್ನು ಕರೆಸಿ ಪ್ರತಿಕೃತಿಗಳ ರಚನೆಗಳನ್ನು ತಯಾರಿಸಲು ಪ್ರಾರಂಭಿಸಲಾಗುತ್ತದೆ.**
>
> ● **ಡಾ.ಎಂ.ಜಗದೀಶ್**, ಜಂಟಿ ನಿರ್ದೇಶಕರು, ತೋಟಗಾರಿಕೆ ಇಲಾಖೆ (ಲಾಲ್‌ಬಾಗ್).

ಲಾಲ್‌ಬಾಗ್‌ನ ಗಾಜಿನ ಮನೆಯ ಒಳಭಾಗದಲ್ಲಿ ಅಂಬೇಡ್ಕರ್ ಅವರ ಪುತ್ಥಳಿ, ಕಲಾಕೃತಿಗಳು ಸೇರಿದಂತೆ ಅವರ ಜೀವನದ ಪ್ರಮುಖ ಘಟನೆಗಳ ಛಾಯಾಚಿತ್ರಗಳೊಂದಿಗೆ ಸಂಕ್ಷಿಪ್ತ ಮಾಹಿತಿ, ಸಂಸತ್ ಭವನ, ಅಂಬೇಡ್ಕರ್ ಅವರ ಜನ್ಮ ಸ್ಥಳ, ಸಂವಿಧಾನದ ಪ್ರತಿಕೃತಿ ಸೇರಿದಂತೆ ವಿವಿಧ ಅಂಶಗಳ ಬಗ್ಗೆ ತಜ್ಞರೊಂದಿಗೆ ಚರ್ಚಿಸಿ, ಗಾಜಿನ ಮನೆ ಒಳಾಂಗಣ ಮತ್ತು ಹೊರಾಂಗಣದಲ್ಲಿ ಏನೇನು ಮಾಡಬಹುದು ಎಂಬುದರ ಕುರಿತು ತೀರ್ಮಾನಿಸಲಾಗುತ್ತದೆ ಎಂದು ಅವರು ತಿಳಿಸುತ್ತಾರೆ.

10 ಲಕ್ಷ ಕುಂಡಗಳಲ್ಲಿ ನೂರಾರು ಬಗೆಯ ಹೂವುಗಳು: ನಗರದ ಲಾಲ್‌ಬಾಗ್, ಕಬ್ಬನ್ ಪಾರ್ಕ್ ಸೇರಿದಂತೆ ವಿವಿಧ ರಾಜ್ಯಗಳಿಂದ ಹಾಗೂ ವಿದೇಶಗಳಿಂದ ವಿಶೇಷವಾಗಿರುವ ಆಕರ್ಷಿತ ಹೂವುಗಳನ್ನು ತರಿಸಲಾಗುತ್ತದೆ.

ಊಟಿಯ ಶೀತವಲಯದ ಹೂವುಗಳು, ರೆಡ್ ಹಾಟ್‌ಪೋಕರ್, ವಿವಿಧ ವರ್ಣೀಯ ಆಕರ್ಷಣೀಯ ಹೂವುಗಳು, ಆರ್ಕಿಡ್ಸ್, ವರ್ಷಕೊಮ್ಮೆ ಅರಳುವ ಹೂವುಗಳು, ಸೇವಂತಿಗೆ, ಗುಲಾಬಿ, ಪಾಯಿನ್ಸಿಟಿಯಾ, ಪೆಂಟಾಸ್ ಕಾರ್ನಿಯಾ, ಜರ್ಬೇರಾ, ಕಾರ್ನೇಷನ್ಸ್, ಟ್ಯೂಬಿ ರೋಸ್ ರೋಟೆಡ್, ಬಿಗೋನಿಯಾ, ಸಿಲೋಷಿಯಾ, ಜರೇನಿಯಂ ಸೇರಿದಂತೆ ವಿವಿಧ ಆಕರ್ಷಕ ಹೂವುಗಳು ಪ್ರೇಕ್ಷಕರನ್ನು ಆಕರ್ಷಿಸಲಿವೆ.

ಟೊಮೆಟೊಗೆ ಮುದುರು ವೈರಸ್ ಕಾಟ

ಬೆಲೆ ಹೆಚ್ಚಳವಾದರೂ ಬೆಳೆಗಾರರಿಗೆ ತಪ್ಪದ ನಷ್ಟ | ಔಷಧ ಸಿಂಪಡಣೆ ಮಾಡಿದರೂ ತೊಲಗದ ವೈರಸ್

◆ **ತಾವರೆಕೆರೆ ಟಿ.ನಾಗರಾಜು**

ತಾವರೆಕೆರೆ: ಟೊಮೆಟೊಗೆ ಬೆಲೆ ಹೆಚ್ಚಾಗಿದೆ. ಆದರೆ, ಮಾರುಕಟ್ಟೆಗೆ ಹಣ್ಣು ಸೂಕ್ತ ಸಮಯಕ್ಕೆ ಸರಬರಾಜಾಗಲು ಮುಖ್ಯವಾಗಿ ಹಣ್ಣಿಗೆ ತಗುಲಿರುವ ಮುದುರು ವೈರಸ್ ರೋಗವೇ ಕಾರಣವಾಗಿದೆ. ಇದರಿಂದಾಗಿ ರೈತರು ಬೆಳೆ ಬೆಳೆದು ಲಾಭ ಕಾಣುವ ಸಮಯದಲ್ಲಿ ನಷ್ಟ ಅನುಭವಿಸುವಂತಾಗಿದೆ.

ಪ್ರತಿ ವರ್ಷವೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಬೆಳೆಗಾರ ನಷ್ಟ ಅನುಭವಿಸುತ್ತಿದ್ದಾನೆ. ಕೆಲವು ಸಮಯದಲ್ಲಿ ಬೆಳೆ ಲಾಭದ ಬೆಳೆಯಾಗಿ ಕಂಡು ಬಂದರೆ, ಮತ್ತೊಂದು ಕಡೆ ದಿಢೀರ್ ಬೆಲೆ ಕುಸಿತದಿಂದಾಗಿ ನಷ್ಟ ಅನುಭವಿಸುತವನು. ಎಳುಬೀಳಿನ ನಡುವೆ ಬೆಳೆಗಾರರು ನೆಮ್ಮದಿ ಜೀವನ ಕಾರಣಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ.

ನಷ್ಟದ ಹಾದಿ ತಪ್ಪಿದ್ದಲ್ಲ : ಟೊಮೆಟೊ ಬೆಳೆದ ರೈತರ ಮೊಗದಲ್ಲಿ ಮಂದಹಾಸ ಕಾಣುತ್ತಿದೆ. ಲಕ್ಷಾಂತರ ರೂಪಾಯಿ ಸಾಲ ಮಾಡಿ ಟೊಮೆಟೊ ಬೆಳೆಗೆ ಮೂರು ವರ್ಷದಿಂದ ನಷ್ಟ ಅನುಭವಿಸುತ್ತ ಸಾಲಗಾರರಾಗಿದ್ದಾರೆ. ಕಳೆದ ವರ್ಷ ಸ್ವಲ್ಪ ಬೆಲೆಯಲ್ಲಿ ಚೇತರಿಕೆ ಕಂಡು ಬಂದಿದೆ.

ಈ ಭಾರಿ ಟೊಮೆಟೊ ಬೆಳೆ ಬಂಪರ್ ಬೆಳೆ ಬಂದಿದೆ: ರೈತರು ತಮ್ಮ ಹಿಂದಿನ ವರ್ಷದ ಸಾಲವನ್ನೇ ತೀರಿಸಲು ಸಾಧ್ಯವಾಗದ ಸ್ಥಿತಿಯಲ್ಲಿದ್ದಾರೆ. ಈ ಬೆಳೆಯಲ್ಲಾದರೂ ಲಾಭದ ನೀರಿಕ್ಷೆಯಲ್ಲಿದ್ದಾರೆ. ಆದರೆ, ಮುದುರು ವೈರಸ್ ಬೆಳೆಯನ್ನು ಆವರಿಸಿದೆ. ಈ ವೈರಸ್ ಆವರಿಸಿಕೊಂಡಲ್ಲಿ ಟೊಮೆಟೊ ಗಿಡ ಯಾವುದೇ ಕಾರಣಕ್ಕೂ ಅಭಿವೃದ್ಧಿ ಕಾಣುವುದಿಲ್ಲ.

ಗಿಡದಲ್ಲಿರುವ ಕಾಯಿ ಮಾತ್ರ ಹಣ್ಣಾಗುತ್ತದೆ. ನಂತರ ಇದರ ಬಗ್ಗೆ ಯಾವುದೇ ಔಷಧಿ ಸಿಂಪಡಣೆ ಮಾಡಿದರು ಸಹ ಗಿಡ ಬೆಳೆಯದೆ ಕುಂಠಿತವಾಗುತ್ತದೆ.

ಪ್ರತಿವರ್ಷವೂ ಬೆಳೆ ಬೆಳೆಯಲು ಆರಂಭಿಸಿದ್ದಾಗ ಲಾಭದ ಕನಸು ಕಾಣುವ ರೈತರಿಗೆ ಕೈ ಕೆಸರಾಗುತ್ತದೆ. ಆದರೆ, ಬಾಯಿಗೆ ಲಾಭದ ಸಿಹಿ ತಲುಪುವುದೇ ಇಲ್ಲ. ಆದರೆ, ಈಗ 15 ಕೆಜಿ ಟೊಮೆಟೊ ಹಣ್ಣಿನ ಬಾಕ್ಸ್ ಸಾಧರಣ ಟೊಮೆಟೊ 700 ರಿಂದ 800 ರೂ. ಇದೆ. ಉತ್ತಮವಾದ ಟೊಮೆಟೋ 15 ಕೆ.ಜಿ ಹಣ್ಣಿನ ಬಾಕ್ಸಿಗೆ ಒಂದು ಸಾವಿರದಿಂದ ಒಂದು ಸಾವಿರ ನೂರು ರೂ. ಗಳಾಗಿದೆ. 6 ಎಕರೆ ತೋಟ ಮಾಡಲು ಸುಮಾರು 20 ರಿಂದ 25 ಲಕ್ಷ ಖರ್ಚಾಗಿದೆ. ಸರಿಯಾದ ಬೆಳೆ ಆಗದ ಕಾರಣ ಸಂಬಂಧ ಪಟ್ಟ ಅಧಿಕಾರಿಗಳ ಮೊರೆ ಹೋದರೆ ಯಾವೊಬ್ಬ ಅಧಿಕಾರಿಯೂ ಇಲ್ಲಿಗೆ ಸುಳಿಯುತ್ತಿಲ್ಲ. ಆದ್ದರಿಂದ ಹಾಕಿದ ಬಂಡವಾಳಕ್ಕೆ ಬಡ್ಡಿ ಕಟ್ಟದೆ ಸಾಯುವ ಸ್ಥಿತಿ ತಲುಪಿದ್ದೇವೆ ಎಂದು ರೈತರು ಅಳಿಲು ತೋಡಿಕೊಳ್ಳುತ್ತಿದ್ದಾರೆ.

ಬೇಸಾಯ ಮಾಡಲು ಬೇಸರ

ಸರ್ಕಾರ ಈ ಕಡೆ ಗಮನ ಹರಿಸಿ ಅಧಿಕಾರಿಯನ್ನು ವಾರಕ್ಕೊಮ್ಮೆಯಾದರೂ ಗ್ರಾಮೀಣ ಭಾಗದ ಹಳ್ಳಿಗಳ ತೋಟಗಳಿಗೆ ಭೇಟಿ ನೀಡಿ ಸಮಸ್ಯೆಯನ್ನು ಬಗೆಹರಿಸುವಂತೆ ಮಾಡಬೇಕು. ಮುಂದಿನ ದಿನದಲ್ಲಿ ಈ ರೀತಿಯಾದರೆ ಟೊಮೆಟೊ ಬೆಳೆ ಬೆಳೆಯುವುದೇ ಬೇಡವೆಂದು ಹೇಳುವಷ್ಟು ಬೇಸರವಾಗುತ್ತಿದೆ ಕನಿಷ್ಠ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಾಗೂ ಕುಟುಂಬ ಪೋಷಿಸುವುದುಕ್ಕಾದರೂ ಹಣ ಉಳಿಯದಿದ್ದರೆ ಇಂತಹ ವ್ಯವಸಾಯ ಏಕೆ ಬೇಕೆಂದು ಬೇಸರವಾಗುತ್ತಿದೆಂದು ಬೆಳೆಗಾರರು ಹೇಳುವರು.

ನಿರೀಕ್ಷೆ ಹುಸಿಯಾಯಿತು

ಇಂತಹ ಉತ್ತಮ ಟೊಮೆಟೋ ಹಣ್ಣಿಗೆ ದರ ಇದೆ. ಮಾರುಕಟ್ಟೆಗೆ ಹಾಕಿದರೆ ಬರೀ ದಳ್ಳಾಳಿಗಳಿಗೆ ಕೈತುಂಬಾ ಕಮಿಷನ್ ಹೋಗುತ್ತದೆ. ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿದ್ದ ರೈತನಿಗೆ ಏನು ಸಿಗದೆ ನೋವು ಅನುಭವಿಸುತ್ತಿದ್ದೇವೆ. ಈ ಭಾರಿ ಗಗನಕ್ಕೇರಿದ ಟೊಮೆಟೊ ಬೆಲೆ ಕಂಡು ನಮ್ಮ ಸಾಲ ತೀರಲಿದೆ ಎಂಬ ನಿರೀಕ್ಷೆಯಲ್ಲಿದ್ದೇವು. ಆದರೆ, ಅದು ಹುಸಿಯಾಯಿತು ಎಂದು ಬೆಳೆಗಾರ ತಾವರೆಕೆರೆ ಶಿವಕುಮಾರ್ ವಿಷಾದಿಸಿದರು.

10-07-2024
Hosadiganta Pg 07

2 | WEDNESDAY, JULY 10, 2024
BANGALORE TIMES, THE TIMES OF INDIA

VARI

There are over 200 varieties of raspberries

There are over 200 varieties of raspberries and while most are red, you can also find purple, yellow and black ones. The yellow ones are the sweetest, but most fragile. Raspberries have anti-inflammatory properties and can help boost the immune system and improve cardiovascular health.